**<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ , ಉಡುಪಿ ಜಿಲ್ಲೆ , ಉಡುಪಿ</u>**

<u>ಸೆಷನ್ಸ್ ಕೇಸ್ ನಂಃ 3/2021</u> <u>ಪಿ.ಡಬ್ಲ್ಯೂಃ 10</u>

<u>ಸಿ.ಡಬ್ಲ್ಯೂಃ 8</u>

| | |
|---|---|
| ಸಾಕ್ಷಿದಾರರ ಹೆಸರು | ಮೊಹಮದ್ ಯುನೈಜ್ |
| ತಂದೆಯ ಹೆಸರು | ಅಬ್ದುಲ್ ರೆಹಮಾನ್ |
| ವಯಸ್ಸು | 32 ವರ್ಷ |
| ಉದ್ಯೋಗ | ಖಾಸಗಿ ಕೆಲಸ |
| ವಿಳಾಸ | ಹೆಜಮಾಡಿ |

ದಿನಾಂಕಃ 06-03-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**<u>ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ</u>**

1) ನ್ಯಾಯಾಲಯದ ಮುಂದೆ ಇರುವ ಆರೋಪಿತರು ಗೊತ್ತಿಲ್ಲ. ಮೃತ ಸದಾಕತ್ ಅನ್ಸಾರಿ ಗೊತ್ತು. ಆತ ನನ್ನ ಮನೆಯ ಪಕ್ಕದಲ್ಲಿ ವಾಸವಾಗಿದ್ದ. ಅವರ ಮನೆಯಲ್ಲಿ ಯಾರೆಲ್ಲಾ ವಾಸವಾಗಿದ್ದರು ಎಂದು ಗೊತ್ತಿಲ್ಲ. ಸದಾಕತ್ ಅನ್ಸಾರಿ ಸುಮಾರು 6 ವರ್ಷಗಳ ಹಿಂದೆ ತೀರಿದ್ದ. ಸದಾಕತ್ ಅನ್ಸಾರಿ ಮನೆಯಲ್ಲಿ ಇಲ್ಲವೆಂದು ಅವರ ಮನೆಯವರು ಮಾತನಾಡುತ್ತಿದ್ದುದು ಕೇಳಿತು. ಆಗ 2 ನೇ ಆರೋಪಿ ನನ್ನ ಬಳಿ ಬಂದು ಸದಾಕತ್ ಅನ್ಸಾರಿಯನ್ನು ಹುಡುಕಬೇಕೆಂದು ಕರೆದಿದ್ದ. ಅದಕ್ಕಾಗಿ ನಾನು ನನ್ನ ವಾಹನ ಬೈಕ್ ನಲ್ಲಿ ಹೆಜಮಾಡಿಯ ಎನ್.ಎಸ್ ರೋಡ್ ಗೆ ಹೋಗಿ ಹುಡುಕಿದೆವು. ನಂತರ ಅಲ್ಲಿಂದ ಹೆಜಮಾಡಿಗೆ ಹುಡುಕಲು ಹೋಗಿದ್ದೆವು. ಹೆಜಮಾಡಿಯಲ್ಲಿ ಒಂದು ತೋಡಿನಲ್ಲಿ ಸದಾಕತ್ ಅನ್ಸಾರಿ ಮತ್ತು ಆತನ ಸ್ಕೂಟಿ ಬಿದ್ದಿತ್ತು. ಅದಕ್ಕಾಗಿ ನಾನು ಸಹ ತೋಡಿಯಲ್ಲಿ ಇಳಿದು ಆತನನ್ನು ನೋಡಿದ್ದೆ, ಆಗ ಆತ ಮಾತನಾಡುತ್ತಿರಲಿಲ್ಲ. ಆತನಿಗೆ ಪ್ರಜ್ಞೆ ಇರಲಿಲ್ಲ. ಆಗ 2 ನೇ ಆರೋಪಿ ಗುಂಡಿಯಿಂದ ಹೊರಗೆ ಮೇಲೆಯೇ ಇದ್ದ. ನಾವು ಹುಡುಕಲು ಹೋದಾಗ 2 ನೇ ಆರೋಪಿ ತೋಡಿಯಲ್ಲಿ ಬಿದ್ದಿದ್ದ ಅನ್ಸಾರಿ ಮತ್ತು ಆತನ ಸ್ಕೂಟಿಯನ್ನು ನೋಡಿದ್ದ.

2) ನಂತರ ನಾನು ಮತ್ತು 2 ನೇ ಆರೋಪಿ ಮನೆಗೆ ಹೋಗಿ, ಚಾಸಾ-5 ಈತನ ಕಾರನ್ನು ತಂದಿದ್ದೆವು. ನಂತರ ಸದಾಕತ್ ಅನ್ಸಾರಿಯನ್ನು ನಾನು ಮತ್ತು ಚಾಸಾ-5 ಸೇರಿ ತೋಡಿಯಿಂದ ಎತ್ತಿ, ಕಾರಿನಲ್ಲಿ ಹಾಕಿದ್ದೆವು. ಆಗ 2 ನೇ ಆರೋಪಿ ಕಾರಿನಲ್ಲಿ ಹಾಕಲು ಸಹಾಯ ಮಾಡಿದ್ದ. ನಂತರ ಸದಾಕತ್ ನನ್ನು ನಾವು ಪಡುಬಿದ್ರೆಯ ಸಿದ್ದಿವಿನಾಯಕ ಆಸ್ಪ ತ್ರೆಗೆ ಕರೆದುಕೊಂಡು ಹೋಗಿದ್ದೆವು, ಅಲ್ಲಿಂದ ಕಾಪುವಿನ ಪ್ರಶಾಂತ್ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆವು, ಅಲ್ಲಿಯೂ ಆಗುವುದಿಲ್ಲ ಎಂದು ಹೇಳಿದ್ದರಿಂದ ಅಜ್ಜರಕಾಡಿನ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆವು. ಅಲ್ಲಿಂದ ಕೆಎಂಸಿಗೆ ಹೋಗಲು ಹೇಳಿದ್ದರು. ಅಲ್ಲಿ ಸದಾಕತ್ ತೀರಿರುವುದು ತಿಳಿದಿತ್ತು. ಅಲ್ಲಿಯೇ ಶವಗಾರಕ್ಕೆ ಆತನನ್ನು ಹಾಕಿದ್ದೆವು. ನಂತರ ನಾನು, 2 ನೇ ಆರೋಪಿ ಮತ್ತು ಚಾಸಾ-5 ಮನೆಗೆ ಹೋಗಿದ್ದೆವು. ನಂತರ ಏನಾಯಿತು ಎಂದು ಗೊತ್ತಿಲ್ಲ. ಸದಾಕತ್ ಅನ್ಸಾರಿ ಹೇಗೆ ತೀರಿದ್ದನು ಎಂದು ಗೊತ್ತಿಲ್ಲ. 2 ನೇ ಆರೋಪಿ ಮಾರನೇ ದಿನ ಪೊಲೀಸರಿಗೆ ಆತನ ಅಣ್ಣ ಅಪಘಾತದಲ್ಲಿ ತೀರಿದ್ದನು ಎಂದು ದೂರು ಕೊಟ್ಟಿದ್ದ ವಿಚಾರ ಗೊತ್ತಿಲ್ಲ. ಪೊಲೀಸರು ನನ್ನನ್ನು ವಿಚಾರಿಸಿಲ್ಲ.

**( ಈ ಹಂತದಲ್ಲಿ ಅಭಿಯೋಜಕರ ವಿನಂತಿಯ ಮೇರೆಗೆ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿಸವಾಲು ಮಾಡಲು ಅಭಿಯೋಜಕರಿಗೆ ಅನುಮತಿ ಕೊಡಲಾಯಿತು)**

**<u>ಪಾಟಿಸವಾಲು: ಸರಕಾರಿ ಅಭಿಯೋಜಕರಿಂದ:</u>**

1) ತೋಡಿಯಲ್ಲಿ ಬಿದ್ದಿದ್ದ ಮೃತನನ್ನು ನೋಡಿದಾಗ 2 ನೇ ಆರೋಪಿಗೆ ಆತನ ಅಣ್ಣ ತೀರಿದ್ದ ಬಗ್ಗೆ ಯಾವುದೇ ಭಾವನೆಗಳು ಇರಲಿಲ್ಲ ಎಂದರೆ ಗೊತ್ತಿಲ್ಲ. 2 ನೇ ಆರೋಪಿಯ ಅಣ್ಣ ಅಪಘಾತದಲ್ಲಿ ತೀರಿದ್ದನು ಎಂದು ಕೊಟ್ಟ ದೂರಿನ ಬಗ್ಗೆ ನನಗೆ ಮಾಹಿತಿ ಇದೆ ಎಂದರೆ ಸರಿಯಲ್ಲ. ಆದಿನ ನಾನು ಹುಡುಕಲು ಹೋದ ದಿನ ರಾತ್ರಿ ಅದಕ್ಕೂ ಮೊದಲು ಮೃತ ಸದಾಕತ್ ಮತ್ತು ಆತನ ಹೆಂಡತಿ 1 ನೇ ಆರೋಪಿಯ ನಡುವೆ ಗಲಾಟೆ ಆಗಿ, 1 ನೇ ಆರೋಪಿ ದೂಡಿದ್ದರಿಂದ, ಆತನ ತಲೆಗೆ ಪೆಟ್ಟಾಗಿ ಆತ ತೀರಿದ್ದ ಎಂದರೆ ಗೊತ್ತಿಲ್ಲ. ಆ ಸಾವಿನ ಕಾರಣ 1 ನೇ ಆರೋಪಿಯ ಮೇಲೆ ಬರುತ್ತದೆ ಎಂದು ಅದನ್ನು ತಪ್ಪಿಸಲು, 2 ನೇ ಆರೋಪಿ, 1 ನೇ ಆರೋಪಿಯೊಂದಿಗೆ ಮೃತನನ್ನು

ಆತನ ಸ್ಕೂಟಿಯಲ್ಲಿ ಸಾಗಿಸಿ, ಹೆಜಮಾಡಿಯ ತೋಡಿನಲ್ಲಿ ಸ್ಕೂಟಿಯ ಸಮೇತ ಹಾಕಿ, ಮನೆಗೆ ಬಂದಿದ್ದರು ಎಂದು ನನಗೆ ತಿಳಿದಿತ್ತು ಎಂದರೆ ಸರಿಯಲ್ಲ. ಆದಿನ ಚಾಸಾ-1 ಮತ್ತು 2 ಇವರು, ಮೃತನನ್ನು ಸಾಗಿಸುವುದನ್ನು ನೋಡಿದ್ದರು ಎಂದರೆ ಸರಿಯಲ್ಲ.

2) ಆರೋಪಿತರು ಸದಾಕತ್ ಅನ್ಸಾರಿಯ ಮರಣ ಮತ್ತು ಆತನನ್ನು ಸಾಗಿಸಿ ತೋಡಿಗೆ ಹಾಕಿದ್ದ ಬಗ್ಗೆ ನಾನು ಪೊಲೀಸರಿಗೆ ಈಗ ಓದಿದ ಹೇಳಿಕೆಯನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು **ನಿಶಾನೆ ಪಿ-23** ಎಂದು ಗುರುತಿಸಿದೆ. ನನಗೆ ಸದರಿ ಹೇಳಿಕೆಯ ಬಗ್ಗೆ ಮಾಹಿತಿ ಇದ್ದರೂ ಸಹ, ಈಗ ಆರೋಪಿತರು ನನ್ನ ನೆರಮನೆಯವರು ಎಂದು ಅವರಿಗೆ ಸಹಾಯ ಮಾಡಲು ಈ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲು: ಶ್ರೀ ಪಿ.ಪಿ.ಜೆ ವಕೀಲರಿಂದ ಆರೋಪಿತರ ಪರವಾಗಿ ಇಲ್ಲ ಎಂದು ಹೇಳಿದ್ದಾರೆ**

**ಮರು ವಿಚಾರಣೆ - ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ಕೆ.ಎಸ್. ಗಂಗಣ್ಣವರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ